


International Journal of Kannada Research
www.kannadajournal.com

**ISSN: 2454–5813**
IJKR 2023; 9(2): 50-51
© 2023 IJKR
www.kannadajournal.com
Received: 23-02-2023
Accepted: 29-03-2023

**ಡಾ. ಬಸ್ತ್ಯಾಂವ್ ಪಾಯ್ಸ್**
ಕನ್ನಡ ಪ್ರಾಧ್ಯಾಪಕರು, ಸಂತ ಫಿಲೋಮಿನಾ ಕಾಲೇಜು, ಪುತ್ತೂರು, ಕರ್ನಾಟಕ, ಭಾರತ

**Corresponding Author:**
**ಡಾ. ಬಸ್ತ್ಯಾಂವ್ ಪಾಯ್ಸ್**
ಕನ್ನಡ ಪ್ರಾಧ್ಯಾಪಕರು, ಸಂತ ಫಿಲೋಮಿನಾ ಕಾಲೇಜು, ಪುತ್ತೂರು, ಕರ್ನಾಟಕ, ಭಾರತ

# ಕನಕದಾಸರ ಕೀರ್ತನೆಗಳಲ್ಲಿ ಕುಲದ ಪ್ರಶ್ನೆ

**ಡಾ. ಬಸ್ತ್ಯಾಂವ್ ಪಾಯ್ಸ್**

**ಪೀಠಿಕೆ**

ದಾಸ ಸಾಹಿತ್ಯದ ಚರಿತ್ರೆಯಲ್ಲಿ ಒಬ್ಬ ದಾರ್ಶನಿಕನಾಗಿ, ಕವಿಯಾಗಿ, ಸಂತನಾಗಿ ಹುಟ್ಟಿ ಸಮಾಜವನ್ನು ಸಮಾನತೆಯ ನೆಲೆಯಲ್ಲಿ ಕೊಂಡೊಯ್ದ ಮಾತೃ ಹೃದಯಿ ಕನಕದಾಸರು. ಸಮಾಜದಲ್ಲಿನ ಮೇಲು–ಕೀಳು, ಬಡವ–ಶ್ರೀಮಂತ ಎಂಬ ತಾರತಮ್ಯ ಧೋರಣೆಯನ್ನು ಹೋಗಲಾಡಿಸಲು ಪ್ರಯತ್ನಿಸಿದರು. ಜೊತೆಗೆ ಸಾಮಾಜಿಕ ಕಳಕಳಿಯನ್ನು ಹೊಂದಿ ಸಾಮಾನ್ಯ ಜನರೊಂದಿಗೆ ಸಮಾನತೆಯ ಸ್ಥಾನಮಾನದ ವಿಚಾರಗಳಿಗೆ ಹೋರಾಟಕ್ಕಿಳಿದು ಕೆಳ ಜನಾಂಗಕ್ಕೆ ಆಗುತ್ತಿದ್ದ ನೋವು, ಬೇಸರ, ಅಪಮಾನ, ಕೀಳರಿಮೆಗಳನ್ನು ಭಕ್ತಿಯ ಆಚರಣೆಯ ಮೂಲಕ ಹೋಗಲಾಡಿಸಿ ಮಾನವೀಯ ಮೌಲ್ಯಗಳನ್ನು ಹೇಳುವ ಅನುಭಾವಿಯಾಗಿದ್ದವರು ಕನಕದಾಸರು.

ಕನಕದಾಸರು ವಿಜಯನಗರ ಅರಸರ ಪಾಳೇಗಾರನ ಮಗನಾಗಿ ಹಾವೇರಿ ಜಿಲ್ಲೆಯ ಬಾಡಗ್ರಾಮದಲ್ಲಿ ಬೀರಪ್ಪ ಮತ್ತು ಬಚ್ಚಮ್ಮ ದಂಪತಿ ಮಗನಾಗಿ ಹುಟ್ಟಿದರು. ಶ್ರೀನಿವಾಸನ ಅನುಗ್ರಹದಿಂದ ಹುಟ್ಟಿದ್ದರಿಂದ ತಿಮ್ಮಪ್ಪನೆಂದು ಹೆಸರು ಇಡಲಾಯಿತು. ಈತನು ಬಾಲ್ಯದಲ್ಲೆ ತಂದೆ–ತಾಯಿ ಕಳೆದುಕೊಂಡು ನಂತರ ಅರಸೊತ್ತಿಗೆಯ ಢಣಾಯಕ ವೃತ್ತಿ ತಮ್ಮಪ್ಪನ ಪಾಲಿಗೆ ಒದಗಿ ಬಂತು ಮುಂದೆ ದೈವ ಕೃಪೆಯಿಂದ 'ನಿಧಿ'ದೊರಕಿ ಆ ನಿಧಿಯನ್ನು ದೇವಾಲಯಗಳ ಜೀರ್ಣೋದ್ಧಾರಗಳಿಗೆ ಬಳಸಿದ್ದರಿಂದ ತಿಮ್ಮಪ್ಪ ಕನಕನಾಯಕನಾದನು. ಕನಕನಾಯಕನು ತುಂಬಾ ಧೈರ್ಯಶಾಲಿಯಾಗಿ ಯುದ್ಧದಲ್ಲಿ ಹೋರಾಡುವಾಗ ಗಾಯಗೊಂಡು ಬಿದ್ದಿದ್ದ ಅವನನ್ನು ಶ್ರೀಹರಿ ಎಬ್ಬಿಸಿ ಕಾಪಾಡಿದನೆಂದು ಪ್ರತೀತಿ. ತದನಂತರ ಶ್ರೀಹರಿಯಲ್ಲಿ ಮನಸ್ಸು ಹರಿದು ದೈಹಿಕ ಬಲಕ್ಕಿಂತ ದೈವಬಲವೇ ಮಿಗಿಲೆಂದು ಬಗೆದು ಕನಕನಾಯಕ ಎಲ್ಲವನ್ನು ತೊರೆದು ವಿರಕ್ತನಾದನು.

ಕನಕದಾಸರು ಸಮಾಜದ ಕೆಳಸ್ತರದಿಂದ ಬಂದು ದಾಸಸಾಹಿತ್ಯಕ್ಕೆ ಮಾತ್ರವಲ್ಲದೆ ಕನ್ನಡ ಸಾರಸತ್ವ ಲೋಕಕ್ಕೆ ಕೀರ್ತನೆಗಳೊಂದಿಗೆ ನಳಚರಿತ್ರೆ, ಹರಿಭಕ್ತಿಸಾರ, ಮೋಹನತರಂಗಿಣಿ, ರಾಮಧಾನ್ಯ ಚರಿತ್ರೆ ಎಂಬ ಕೃತಿಗಳನ್ನು ನೀಡಿದ್ದಾರೆ.

ಕನಕದಾಸರ ಕುಲಕುಲ ಎನ್ನುತಿಹರೋ ಎಂಬ ಕೀರ್ತನೆ ಬಹಳ ಪ್ರಸಿದ್ಧವಾಗಿದೆ. ಕಾಗಿನೆಲೆಯಾದಿ ಕೇಶವನ ಭಕ್ತರಿಗೆ ಕುಲ ಯಾವುದು ಹೇಳಿರಯ್ಯ ಎಂದು ಹೇಳುವಾಗ ಆ ಭಕ್ತರಲ್ಲಿ ಕನಕದಾಸರು ಒಬ್ಬರೆಂಬುದರಲ್ಲಿ ಸಂಶಯವಿಲ್ಲ. ಆದಿಕೇಶವನ ಭಕ್ತರಾಗಿದ್ದು ಬದುಕಿನ ಅಂತಿಮ ಗುರಿ ಅರಿತುಕೊಳ್ಳಲು ಪ್ರಯತ್ನಿಸಿ, ಅದನ್ನು ಅರಿತುಕೊಂಡು ಅನ್ಯರಿಗೂ ಅರುಹಲು ಹೊರಟ ಕನಕದಾಸರಂತಹ ಮಹಾತ್ಮರ ಕುಲವನ್ನು ಆ ಕಾಲದಲ್ಲಿ ಕೆಲವರು ಎತ್ತಿ ಆಡಿದ್ದಾರೆ. ಹೀಗಾಗಿ ಕುಲದ ಪ್ರಶ್ನೆ ಕನಕದಾಸರಿಗೆ ಒಂದು ವೈಚಾರಿಕ ವಿಷಯವಾಗಿರದೆ, ದಲಿತೋದ್ಧಾರಕ ಢಾಂಭಿಕ ತೋರಿಕೆಯಾಗಿರದೆ ಸ್ವಾನುಭವದ ವಾಸ್ತವ ವಿಷಯವಾಗಿತ್ತು. ಆದ್ದರಿಂದಲೇ ಕನಕದಾಸರು ವರ್ಣವ್ಯವಸ್ಥೆಯ ಲೋಪ ದೋಷಗಳಲ್ಲಿ ಅವ್ಯವಸ್ಥೆಯನ್ನು ಖಂಡಿಸಿ ಬರೆಯುವಾಗ 'ಹುಟ್ಟಿನಿಂದಾದ ಕುಲ ಕುಲವಲ್ಲ' ಎಂಬುದನ್ನು ಸಾಧಿಸುವುದರ ಕಡೆಗೆ ಅವರು ಹೆಚ್ಚಾಗಿ ಪ್ರಯತ್ನಿಸಿದ್ದರು. ಅದಕ್ಕಾಗಿಯೇ ಅವರು ಅನೇಕ ಕಡೆಗಳಲ್ಲಿ ತಾವರೆ, ಕ್ಷೀರ ಮೊದಲಾದ ಸಂಕೇತಗಳನ್ನು ಬಳಸಿ ಕೊನೆಗೆ ನೇರವಾಗಿ ಮಾನವ ಪ್ರಪಂಚಕ್ಕೆ ಬರುತ್ತಾರೆ. ನಂತರ ವಸಿಷ್ಠ, ನಾರದ ಮೊದಲಾದ ಬ್ರಾಹ್ಮಣರೆಂದು ಪ್ರಸಿದ್ಧರಾದವರ ಮೂಲವನ್ನು ಹೇಳಿ, ಜಾತಿ ಹುಟ್ಟಿನಿಂದಲ್ಲ ಎಂಬುದನ್ನು ಸಮರ್ಥಿಸುತ್ತಾರೆ.

ಕನಕದಾಸರು ಕುಲದ ಬಗ್ಗೆ ಹೇಳುವಾಗ ಆಕ್ರೋಶಭರಿತರಾಗುತ್ತಾರೆ. 'ಕುಲ ಕುಲವೆಂದು ಹೋರಾಡದಿರಿ ನಿಮ್ಮ ಕುಲದ ನೆಲೆಯೇನಾದರೂ ಬಲ್ಲಿರಾ' ಎಂದು ಮುಖಕ್ಕೆ ತಿವಿಯುವಂತೆ ಪ್ರಶ್ನಿಸಿದ್ದಾರೆ. ಜಲವೆ ಸಕಲ ಕುಲಕ್ಕೆ ತಾಯಿಯಲ್ಲವೇ ಆ ಜಲದ ಕುಲವೇನಾದರೂ ಬಲ್ಲಿರಾ ? ಎಂದು ಜಿಜ್ಞಾಸೆ ಮಾಡುವರು. 'ಹರಿಯೇ ಸರ್ವೋತ್ತಮ ಹರಿಮಯವೆಲ್ಲವೆನುತ ತಿಳಿದು ಕಾಗಿನೆಲೆಯಾದಿಕೇಶವರಾಯನ ಚರಣ ಕಮಲವನು ಕೀರ್ತಿಸುವವನೆ ಕುಲಜ' ಎಂದು ಸ್ಪಷ್ಟ ಪಡಿಸುವರು. 'ಆತ್ಮ ಯಾವ ಕುಲ, ಜೀವ ಯಾವ ಕುಲ ಎಂಬ ಪ್ರಶ್ನೆಯನ್ನು ಮಾಡಿ ಕೊನೆಗೆ ಕನಕದಾಸರೆ ಆದಿಕೇಶವನೊಲಿದ ಮೇಲೆ ಯಾತರ ಕುಲವಯ್ಯ' ಎಂದು ಎಚ್ಚರಿಸುವರು. ಅಂದಿನ ಸಮಾಜದಲ್ಲಿ ಮೇಲ್ವರ್ಗದವರು ಜಾತಿಯನ್ನು ತಮ್ಮ ಹಿರಿಮೆಗೆ, ಅಂತಸ್ತಿಗೆ ಅಸ್ತ್ರವಾಗಿ ಬಳಸಿಕೊಂಡಿದ್ದರು. ಕನಕದಾಸರು ಈ ರೀತಿಯ ಬಳಕೆ ಅಪಾಯಕಾರಿ ಹಾಗೂ ಮನುಕುಲದ ಅನಿಷ್ಠ ಎಂದು ಅದನ್ನು ವಿರೋಧಿಸಿದರು.

ಹೀಗೆ ದಾಸ ಸಾಹಿತ್ಯದಲ್ಲಿ ಕನಕದಾಸರು ಅಗ್ರಗಣ್ಯರೆನಿಸಿ, ಮನುಷ್ಯರ ನಡುವಿನ ಅಸಮಾನತೆಯನ್ನು ಡಾಂಭಿಕರೆಯನ್ನು ಕಂದಾಚಾರದ ಬದುಕನ್ನು, ಜನರ ನಂಭಿಕೆ, ನಡವಳಿಕೆಯನ್ನು ತನ್ನ ಕಾವ್ಯದ ವಸ್ತುವಾಗಿಸಿಕೊಂಡು ಸಾಮಾಜಿಕ ಹಾಗೂ ಧಾರ್ಮಿಕ ವಿಷಯಗಳಲ್ಲಿ ಕ್ರಾಂತಿಯ ಅಲೆಯನ್ನು ಎಬ್ಬಿಸಿದ ಮಹಾನ್ ಪ್ರತಿಭೆ ಕನಕದಾಸರು.

**ಗ್ರಂಥ ಋಣ**


1. ಕನಕ ಚಿಂತನೆ – 2007–2008 ಮಂಗಳೂರು ವಿಶ್ವವಿದ್ಯಾನಿಲಯ
2. ಕನಕ ಚಿಂತನೆ – 2009–2010 " "
3. ಕನಕದಾಸರ ಕೀರ್ತನೆಗಳು.
4. ದಾಸ ಸಾಹಿತ್ಯ ಎಂ. ಎ ಪಠ್ಯ.